ತಾರೀಖು 18ನೆ ಮಾರ್ಚ್ 1907.

ನಂ. 8481—ಸ್ಯಾ. 170-06-16, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಚಿಕ್ಕದೇವರ ರಥೋತ್ಸವ	ಚಿಕ್ಕತಾಸಿನಕೆರೆ ...	ಮಳವಳ್ಳಿ ...	29—3—07	31—3—07
2. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ.	ಮೊರೆಹಳ್ಳಿ ...	ಡಿಟೋ ...	30—5—07	1—6—07

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮದ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚ್ 1907.

ನಂ. 8623—ಸ್ಯಾನಿಟೆರಿ 150-06—8, ಬೆಂಗಳೂರು ಡಿಸ್ಟ್ರಿಕ್ಟು ಆನೇಕಲ್ಲು ತಾಲ್ಲೂಕಿನ ಮಾಯಸಂದ್ರ ಗ್ರಾಮಕ್ಕೆ ಮುತ್ಯಾಲಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚ್ 30ನೆ ತಾರೀಖಿನಿಂದ 1907ನೆ ಇಸವಿ ಏಪ್ರಿಲ್ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚ್ 1907.

ನಂ. 8625—ಸ್ಯಾನಿಟೆರಿ 156-06—14, ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕಿನ ಮೇಲೂರು ಗ್ರಾಮಕ್ಕೆ ಶ್ರೀ ಗಂಗಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚ್ 27ನೆ ತಾರೀಖಿನಿಂದ 1907ನೆ ಇಸವಿ ಏಪ್ರಿಲ್ 6ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚ್ 1907.

ನಂ. 8627—ಸ್ಯಾನಿಟೆರಿ 129-06—8, ಶಿವಮೊಗ್ಗ ಡಿಸ್ಟ್ರಿಕ್ಟು ನಗರ ತಾಲ್ಲೂಕಿನ ರಾಮಚಂದ್ರಪುರಕ್ಕೆ ಶ್ರೀ ರಾಮದೇವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರಿಲ್ 20ನೆ ತಾರೀಖಿನಿಂದ 1907ನೆ ಏಪ್ರಿಲ್ 24ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.